**ಅಸಲು ದಾವಾ ನಂಃ119/2013**
**ಡಿ.ಡಬ್ಲ್ಯೂಃ 03**

**ದಿನಾಂಕಃ06–09–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಟಿ ಟಿ ., ವಾದಿ ಪರ ವಕೀಲರಿಂದ**

15. ಒಟ್ಟು ಕುಟುಂಬದ ಆಸ್ತಿಯಾದ ಷೆಡ್ಯೂಲ್–ಎ ಮತ್ತು ಬಿ ಸ್ವತ್ತುಗಳಿಂದ ಬಂದ ಆದಾಯದಿಂದ ಷೆಡ್ಯೂಲ್–ಸಿ ಸ್ವತ್ತು ಜಮೀನನ್ನು ನನ್ನ ತಂದೆಯವರು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಷೆಡ್ಯೂಲ್–ಸಿ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನನ್ನ ತಂದೆ ಕುಟುಂಬದ ಕತೃರಾಗಿದ್ದ ಕಾರಣ ಕುಟುಂಬದ ಎಲ್ಲಾ ಸದಸ್ಯರು ಒಪ್ಪಿ ಸದರಿಯವರ ಹೆಸರಿಗೆ ಜಮೀನನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಷೆಡ್ಯೂಲ್–ಡಿ ಯಿಂದ ಜಿ ಸ್ವತ್ತುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ದಿಃ29–09–2003 ರಂತೆ ಆದ ನಿಡಿಃ2 ರ ಪಾಲುವಿಭಾಗ ಪತ್ರದಲ್ಲಿ ವಾದಿಯ ತಂದೆ–ತಿಮ್ಮಾರೆಡ್ಡಿ ಮತ್ತು ಗೋವಿಂದರೆಡ್ಡಿಯವರು ಪಕ್ಷಗಾರರಲ್ಲ ಎಂದರೆ ಸರಿ. ನಿಡಿಃ2 ರ ಪಾಲುವಿಭಾಗ ಪತ್ರದಲ್ಲಿ ತಿಮ್ಮಾರೆಡ್ಡಿ ಹಾಗೂ ಗೋವಿಂದರೆಡ್ಡಿಯವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆಯನ್ನು ಹೂಡಿದ ನಂತರ ನಿಡಿಃ2 ರ ಪಾಲುವಿಭಾಗ ಪತ್ರವನ್ನು ನನ್ನ ತಂದೆ ಲಕ್ಷ್ಮಪ್ಪರೆಡ್ಡಿ, ರಾಮಚಂದ್ರರೆಡ್ಡಿ, ವಾಸುದೇವರೆಡ್ಡಿಯವರು ಷರೀಕಾಗಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

16. ದಾವಾ ಹೂಡುವ ಪೂರ್ವದಲ್ಲಿ ವಾದಿಯರು ನನ್ನನ್ನು ಒಳಗೊಂಡು ಇತರೇ ಪ್ರತಿವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಪಾಲನ್ನು ಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿದಾಗ ನಾನು ಮತ್ತು ಪ್ರತಿವಾದಿಯರು ನಿರಾಕರಿಸಿದ್ದೇವು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಿಭಾಗದ ಸಂಬಂಧ ಊರಿನ ಗ್ರಾಮಸ್ಥರ ಸಮಕ್ಷಮ ವಾದಿ ಮತ್ತು ಪ್ರತಿವಾದಿಯರ ನಡುವೆ ಪಂಚಾಯಿತಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯಲ್ಲಿ ಹಿರಿಯರು ವಾದಿಯರಿಗೆ ಭಾಗ ಕೊಡುವಂತೆ ತಿಳುವಳಿಕೆ ನೀಡಿದರು ಸಹ, ಪಂಚಾಯಿತಿ ನಡೆದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

17. ಪ್ರಸ್ತುತವಾಗಿಯೂ ಸಹ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಬೊಮ್ಮನಕುಂಟೆ ಗ್ರಾಮದ ಸರ್ವೇ ನಂ.28/2 ಮತ್ತು 28/3 ರ ಜಮೀನುಗಳನ್ನು ವಾದಿಯರ ತಾಯಿ–ಅನಂತಮ್ಮರವರು ತನ್ನ ತವರು ಮನೆ ಕಡೆಯಿಂದ ತಂದಂತಹ ಆಸ್ತಿಗಳು ಎಂದರೆ ಸರಿಯಲ್ಲ. ದಿಃ13–11–1989 ರಲ್ಲಿ ವಾದಿಯರ ತಾಯಿ–ಅನಂತಮ್ಮರವರು ತನ್ನ

ತವರು ಮನೆಯವರು ಮಾಡಿದ ಹಣ ಸಹಾಯದಿಂದ ಸದರಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ–ಲಕ್ಷ್ಮಮ್ಮಪ್ಪರೆಡ್ಡಿ, ವಾಸುದೇವರೆಡ್ಡಿ ಹಾಗೂ ರಾಮಚಂದ್ರರೆಡ್ಡಿಯವರು ದಾವಾ ಬಾಕಿ ಇರುವಾಗ ವಾದಿಯ ಭಾಗಕ್ಕೆ ಬರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಿಡಿಃ3 ರ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿಃ3 ರ ದಾಖಲೆ ಕಾನೂನುಬಾಹಿರ ಆಗಿರುವ ಕಾರಣ ವಾದಿಯರ ದಾವಾ ಸ್ವತ್ತಿನ ಭಾಗಾಂಶಕ್ಕೆ ಬಂದನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ಸೃಷ್ಟಿ ಮಾಡಿ ಹಾಜರುಪಡಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ವಾದ ಪತ್ರದ ಪ್ರಕಾರ ಡಿಕ್ರಿಯಾದಲ್ಲಿ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.